ವಾರದ ಪತ್ರ

## ಹೀಯಾಳಿಸದಿರಿ...

ಧಾರವಾಹಿಯಲ್ಲಿ ಬರುವ ಬಹುತೇಕ ಎಲ್ಲಾ ಮಹಿಳಾ ಪಾತ್ರಗಳು ಮತ್ತೊಂದು ಹೆಣ್ಣಿನ ಏಳಿಗೆಯನ್ನು ಸಹಿಸದೆ ಶೋಷಣೆ ಮಾಡುವುದು, ಸದಾಕಾಲ ತೊಂದರೆ ನೀಡಲು ಕುತಂತ್ರ ಹೆಣೆಯುವುದನ್ನು ಕಾಣುತ್ತೇವೆ. ಗಂಡು– ಹೆಣ್ಣಿನ ನಡುವೆ ವಿಷಬೀಜ ಬಿತ್ತಿ ಸಂಸಾರ ಹಾಳು ಮಾಡುವುದು. ಮಾತ್ಸರ್ಯದಿಂದ ಗುಟ್ಟಾಗಿ ಸೀರೆ ಹರಿಯುವುದು, ಕಾಫಿ, ಟೀ, ಸಾಂಬಾರಿಗೆ ಉಪ್ಪು ಹಾಕುವುದು, ಮೆಟ್ಟಿಲುಗಳ ಮೇಲೆ ಎಣ್ಣೆ ಸುರಿದು ಬೀಳುವಂತೆ ಮಾಡುವುದು ಹೀಗೆ ಹತ್ತು ಹಲವು ರೀತಿಯಲ್ಲಿ ಚಿತ್ರೀಕರಿಸಿ, ವರ್ಷಾನುಗಟ್ಟಲೆ ಪ್ರಸಾರವಾದರೂ ಕೊನೆಗಾಣದ ಇಂತಹ ಧಾರವಾಹಿಗಳು ಸಮಾಜಕ್ಕೆ ನೀಡಬಯಸುವ ಸಂದೇಶವಾದರೂ ಏನು?

ಹೆಣ್ಣು ಅಬಲೆಯಲ್ಲ ಸಬಲೆ, ಎಲ್ಲ ರಂಗಗಳಲ್ಲೂ ಮಿಂಚಬಲ್ಲಳು ಎನ್ನುವ ಮಹಿಳಾ ಸಂಘಟನೆಗಳು, ಮಹಿಳೆ ಶೋಷಣೆಯ ವಿರುದ್ಧ ಪ್ರತಿಭಟಿಸುತ್ತವೆ. ಮಹಿಳೆಯನ್ನೇ ಕೇಂದ್ರವಾಗಿರಿಸಿಕೊಂಡು ತಯಾರಿಸಲ್ಪಡುವ ಧಾರವಾಹಿಗಳಲ್ಲಿ ಸ್ತ್ರೀ ಶೋಷಣೆಗೆ ಹತ್ತಾರು ಮುಖಗಳು ಮುಗ್ಧ ವೀಕ್ಷಕರಲ್ಲಿ ಏನೆಲ್ಲಾ ಪರಿಣಾಮ ಬೀರಬಹುದು. ಹೆಣ್ಣನ್ನು ವಿಕೃತವಾಗಿ ಚಿತ್ರಿಸುತ್ತಿರುವ ವಿಷಯ ಮಹಿಳಾ ಸಂಘಟನೆಗಳ ಗಮನ ಸೆಳೆಯದಿರುವುದು ಶೋಚನೀಯ.

—ಜಿ.ನಾಗೇಂದ್ರ, ಮಂಗಳೂರು

## ಹಿಗ್ಗುವ ಧಾರಾವಾಹಿ

'ಅಗ್ನಿ ಸಾಕ್ಷಿ' ಈ ಹುಣ್ಣಿಮೆಗೆ ಮುಗಿಯುವುದೆಂಬ ಸೂಚನೆ, ಧಾರಾವಾಹಿಯಲ್ಲಿ ತೋರಿಸಿರುವುದರಿಂದಲೇ ವೀಕ್ಷಕರಿಗೆ ಸಿಕ್ಕಿತ್ತು. ನಾವೆಲ್ಲರೂ ಸದ್ಯ ಮುಗಿಯುತ್ತಲ್ಲಾ ಎಂದು ಸಮಾಧಾನಗೊಂಡಿದ್ದೆವು. ಆದರೆ ಹಾಗೆ ಆಗಲಿಲ್ಲ. ಇನ್ನೂ ಎಷ್ಟು ಹುಣ್ಣಿಮೆಗಳಿಗೆ ಈ ಧಾರಾವಾಹಿಯನ್ನು ಹಿಗ್ಗಿಸುತ್ತಾರೋ!

—ಉಷಾ ಸೋಗಲ್, ತುರಹಳ್ಳಿ

## ನಟಿಯರ ಬದಲಾವಣೆ ಅನಿವಾರ್ಯವೆ?

'ಕಲರ್ಸ್ ಸೂಪರ್' ವಾಹಿನಿಯಲ್ಲಿ ಟಿ.ಎನ್. ಸೀತಾರಾಂರವರು ನಿರ್ದೇಶಿಸಿರುವ ಧಾರಾವಾಹಿ 'ಮಗಳು ಜಾನಕಿ' ಯಲ್ಲಿ ಇದುವರೆಗೂ ಚಂದು ಭಾರ್ಗವಿಯವರ ಪತ್ನಿ 'ರಶ್ಮಿ' ಪಾತ್ರವನ್ನು ನಿರ್ವಹಿಸುತ್ತಿದ್ದ ನಟಿಯನ್ನು ಹಠಾತ್ತಾಗಿ ಬದಲಾಯಿಸಲಾಗಿದೆ. ಆ ನಟಿ ಆ ಪಾತ್ರವನ್ನು ಚೆನ್ನಾಗಿ ನಿರ್ವಹಿಸುತ್ತಿದ್ದರು. ಸಾಮಾನ್ಯವಾಗಿ ಸೀತಾರಾಂರವರ ಧಾರಾವಾಹಿಗಳಲ್ಲಿ ನಟ–ನಟಿಯರ ಬದಲಾವಣೆ ಅತಿ ವಿರಳ. ಈಗೇಕೋ ಈ ರೀತಿಯ ಬದಲಾವಣೆ ತಿಳಿಯಲಿಲ್ಲ.

—ಸುಂದರ್, ಬೆಂಗಳೂರು

## 'ಕಾಣದ ಕಡಲಿಗೆ ಹಂಬಲಿಸಿದೆ ಮನ...'

'ಹಾಡು ಕನ್ನಡ ಕೋಗಿಲೆ' (ಕನ್ನಡ ಕಲರ್ಸ್ ಸೂಪರ್) ಕಾರ್ಯಕ್ರಮದಲ್ಲಿ ಸಾಧು ಕೋಕಿಲರವರು ತೀರ್ಪುಗಾರರು ಆಗಿರುವುದು ಸಂತೋಷ, ಅವರಲ್ಲಿ ನನ್ನದೊಂದು ಭಿನ್ನಹ. ಅವರ ಕಂಠದಿಂದ ದಿ. ಅಶ್ವತ್‌ರವರ ಹಾಡು 'ಕಾಣದ ಕಡಲಿಗೆ ಹಂಬಲಿಸಿದೆ ಮನ' ಕೇಳಬೇಕೆಂಬ ಆಸೆ. ದಯವಿಟ್ಟು ಈ ಕೋರಿಕೆಯನ್ನು ಈಡೇರಿಸುತ್ತಾರೆಂಬ ನಂಬಿಕೆ ಇದೆ. ಒಮ್ಮೆ ಈ ಹಾಡನ್ನು ಅನರು ರಮೇಶ್‌ರವರ ಒಂದು ಕಾರ್ಯಕ್ರಮದಲ್ಲಿ ಹಾಡಿದ್ದರು. ಆಗ ಆ ಹಾಡು ಬಹಳ ಅದ್ಭುತವಾಗಿತ್ತು.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಮಾನವೀಯತೆ

ಉದಯ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಸದಾ ನಿಮ್ಮೊಂದಿಗೆ' ಕಾರ್ಯಕ್ರಮವು ಬಡಜನರಿಗೆ, ಅನಾಥರಿಗೆ ಸಹಾಯಹಸ್ತ ನೀಡುವ, ಕಷ್ಟಕ್ಕೆ ಹೆಗಲು ಕೊಡುವ ಜನಹಿತ ಕಾರ್ಯಕ್ರಮ. ಹೆತ್ತವರನ್ನು ಕಳೆದುಕೊಂಡ ಮೂವರು ತಬ್ಬಲಿ ಮಕ್ಕಳಿಗೆ (ಅದರಲ್ಲೂ ಒಬ್ಬಳು ಮೂಗಿ) ಚಿತ್ರನಟ ಉಪೇಂದ್ರರವರು ಚಿತ್ರಾನ್ನ, ಇಡ್ಲಿ, ದೋಸೆ, ಕಾಫಿ ಮಾರಿ ಬಂದ ದುಡ್ಡಿಗೆ ವೈಯಕ್ತಿಕವಾಗಿ ಒಂದು ಲಕ್ಷ ಸೇರಿಸಿ ಕೊಟ್ಟರು. ಜೊತೆಗೆ ಕಾರ್ಯಕ್ರಮ ನಡೆಸಿ ಕೊಡುವ ಲಕ್ಷ್ಮೀಯವರೂ ಹತ್ತು ಸಾವಿರ ನೀಡಿದರು. ಗ್ರಾಹಕರು ಒಂದು ಪದಾರ್ಥದ ಬೆಲೆಗಿಂತ ಮೂರ್ನಾಲ್ಕು ಪಟ್ಟು ಹೆಚ್ಚು ದುಡ್ಡು ಕೊಟ್ಟಿದ್ದು, ಬರಿ ಸೆಲ್ಫೀಗೂ ದುಡ್ಡು ಕೊಟ್ಟಿದ್ದು ತಮ್ಮ ಕೈಲಾದಷ್ಟು ಸಹಾಯ ನೀಡಿದ್ದಾರೆ. ಇದೇ ಅಲ್ಲವೇ ಮಾನವೀಯತೆಯೆಂದರೆ..!

—ರತ್ನಾ ಅಶೋಕ ಗೊರವರ, ಧಾರವಾಡ

## ವೀಕ್ಷಕರು ಮೂರ್ಖರೇ?

ಕಲರ್ಸ್ ಟಿವಿಯಲ್ಲಿ ಪ್ರಸಾರವಾಗುತ್ತಿರುವ 'ಅಗ್ನಿ ಸಾಕ್ಷಿ'ಯಲ್ಲಿ ಖುಷಿಗೆ ಮಾತು ಬಂದರೂ ಬಾರದ ಹಾಗೆ ನಟನೆ ಮಾಡುವುದು ಸರಿ. ಆದರೆ ಅವಳ ಮನಸ್ಸಿನಲ್ಲಿರುವ ಭಾವನೆಗಳನ್ನು ಅವಳು ಬರೆದು ತೋರಿಸಬಹುದಿತ್ತಲ್ಲಾ? ಅದನ್ನು ಏಕೆ ಮಾಡುವುದಿಲ್ಲ? ಟಿವಿ ವೀಕ್ಷಕರನ್ನು ಏಕೆ ಮೂರ್ಖರನ್ನಾಗಿ ಮಾಡುವಿರಿ?

—ಕೆ.ಬಿ. ಸುಧಾಕರ, ಪುತ್ತೂರು

## ಮರಗಾಲು

ಝೀ ಕನ್ನಡ ವಾಹಿನಿಯ ಡಿಕೆಡಿ ಲಿಟ್ಲ್ ಛಾಂಪ್ಸ್‌ನಲ್ಲಿ ಸೃಜನ್ ಹಾಗೂ ಐಶ್ವರ್ಯ ಅವರು ನೃತ್ಯಕ್ಕೆ ಬಳಸಿದ ವಸ್ತು ಏನೆಂದು ತೀರ್ಪುಗಾರ್ತಿ ರಕ್ಷಿತ ಅವರ ಪ್ರಶ್ನೆಗೆ 'ಮರಗೋಲು' ಎಂದು ನೃತ್ಯ ಸಂಯೋಜಕ ಮಂಜು ಅವರು ತಿಳಿಸುತ್ತಾರೆ. ಇದು ತಪ್ಪು ಉತ್ತರ. ಇದನ್ನು ಮರಗಾಲು ಎಂದು ಕರೆಯುತ್ತಾರೆ. ಮರದ ಕಾಲು, ಮರಗಾಲು. ಗ್ರಾಮೀಣ ಪ್ರದೇಶಗಳಲ್ಲಿ ಕೀಲು ಕುದುರೆ ನೃತ್ಯಕ್ಕೆ ಹಾಗೂ ಸಾಕಷ್ಟು ಪ್ರದರ್ಶನಗಳಲ್ಲಿ ವಿವಿಧ ಉದ್ದದ ಮರಗಾಲು ಕಟ್ಟಿಕೊಂಡು ನಡೆದು ಜನರನ್ನು ಆಕರ್ಷಿಸಿದ್ದೂ ಉಂಟು. ವೀಕ್ಷಕರಿಗೆ ಸರಿಯಾದ ಮಾಹಿತಿ ನೀಡುವುದು ಸೂಕ್ತ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಅವಾಸ್ತವಿಕ

'ಕಮಲಿ' ಹತ್ತರಲ್ಲಿ ಹನ್ನೊಂದು ಎನ್ನುವಂತಿದ್ದರೂ ಕಮಲಿ, ರಿಷಿ ಪಾತ್ರಗಳು ಮತ್ತು ಹಿರಿಯ ನಟಿ ಪದ್ಮಾ ವಾಸಂತಿ ಅವರ ಪ್ರಬುದ್ಧ ನಟನೆ ಕಥೆಯ ನಿಧಾನಗತಿಯನ್ನು ಸಹ್ಯವಾಗಿಸಿವೆ. ಆದರೆ ಕಾಲೇಜಿನ ಕಾರ್ಯಕ್ರಮವೊಂದರಲ್ಲಿ ಕ್ಯಾಬರೆಯಂತಹ ನೃತ್ಯ, ಕಮಲಿ, ರಿಷಿಯವರು ಮಾಲ್‌ನಲ್ಲಿ ಬಂದಿಯಾಗುವುದು ಮುಂತಾದವುಗಳು ಅವಾಸ್ತವಿಕ ಎನಿಸುತ್ತದೆ.

—ಹೇಮಂತ ಸಂಪಗಾಂವಕರ, ಬೆಂಗಳೂರು

## ಗೀತ ಗಾಯನ ರಸದೌತಣ

ವರಮಹಾಲಕ್ಷ್ಮಿ ಹಬ್ಬದಂದು ಪಬ್ಲಿಕ್ ಟಿ.ವಿ.ಯು ಗೀತ ಗಾಯನ ಕಾರ್ಯಕ್ರಮ ನೀಡಿತು. ಹಳ್ಳಿಯ ಹಾಡು ಹಕ್ಕಿ ಎಂಬ ಖ್ಯಾತಿ ಪಡೆದು ಆರ್ಕೆಸ್ಟ್ರಾದಲ್ಲಿ ಹಾಡುವ ಗಾನಗಂಗೆ ಗಂಗಮ್ಮನ ಪರಿಚಯವನ್ನು ಕಳೆದ ತಿಂಗಳು ಪಬ್ಲಿಕ್ ಟಿವಿಯವರೇ ಸಾರ್ವಜನಿಕರಿಗೆ ಪರಿಚಯಿಸಿದ್ದರು. 70–80ರ ದಶಕದ ಸುಮಧುರ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು.

—ಲಲಿತಾ ಅಂಬಾಗಿಲು, ಉಪ್ಪುಂದ